129 from Agriculture Division, 28 from Civil Division, 5 from General Accounts Division, and 12 from Cane Accounts Division, in all 436 workers have been terminated and this is done as per the usual procedure followed every year. This is a co-operative Sugar Factory run by the Management of the Co-operative Society according to Co-operation law. In this regard, neither the Union nor anybody has approached the Government a with complaint. However, the Assistant Labour Commissioner, Belgaum has visted the factory on 30-6-1990 and the Management was requested to furnish their reasons for termination, before 9-7-1990 which is awaited and I will take action if it is illegal.

SRI SUBASH JOSHI.—Sir, the complaint is already lodged. I am the President of the Union. Secondly during off-season also some seasonal workers are required and for recruitment the criteria is that "first come should go last". Seasonal workers who have completed 240 days have been terminated. I have already lodged the complaint.

SRI K. H. PATIL.—Since the Hon'ble Member says that he is the President of the Union and that the complaint has been lodged I will look into the matter.

SRI SUBASH JOSHI.—Though the factory is a co-operative unit, the Body is nominated by the new Government.

SRI K. H. PATIL.—It does not mean that it is a Government body. It will be a co-operative body. In the place of an Elected body, the Govrnment might have nominated the body. But the nominated body has got all the powers of the Elected body.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರಿಂದ ಅಗ್ರಹಾರ ದಾಸರಹಳ್ಳಿಯ ೬೯/೨ ಯಲ್ಲಿನ ನಿವೇಶನಗಳ ಅನುಮೋದನೆ

೫೦೬ (೧೬೬೦) ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಬೆಂಗಳೂರು ಅಗ್ರಹಾರ ದಾಸರಹಳ್ಳಿಯ ಸರ್ವೆ ನಂ. ೬೯/೨ಬಿ ಯಲ್ಲಿರುವ ೧ ಎಕರೆ ೨೦ ಗುಂಟೆ ಜಮೀನಿಗೆ ಸರ್ಕಾರವು ತನ್ನ ಆದೇಶ ಸಂಖ್ಯೆ ಹೆಚ್‌ಯುಡಿ ೯ ಸಿಇಸಿ ೮೨ ದಿನಾಂಕ ೨೧-೩-೧೯೮೩ರ ಆದೇಶ ನೀಡಿರುವುದು ಮತ್ತು ನೋಂದಣಿ ಆಧಾರದ ಮೇಲೆ ಭೂ ಮಾಲೀಕರಿಂದ ಗೃಹ ನಿರ್ಮಾಣ ಸಂಸ್ಥೆಗೆ ವರ್ಗಾವಣೆ ಮಾಡಿರುವುದು ನಿಜವೇ?

ಆ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಈ ಬಡಾವಣೆಗೆ ಅನುಮತಿ ನೀಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಗೃಹ ನಿರ್ಮಾಣ ಸಂಸ್ಥೆಯಿಂದ ನೋಂದಣಿ ಪತ್ರದ ಆಧಾರದ ನಿವೇಶನ ಪಡೆದವರಿಗೆ ಪ್ರಾಧಿಕಾರವು ತೊಂದರೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಗೃಹ ನಿರ್ಮಾಣ ಸಂಸ್ಥೆಯು ಪರವಾಗಿ ಬಡಾವಣೆಯನ್ನು ಅನುಮೋದಿಸಿ ತೊಂದರೆಯನ್ನು ಕೊನೆಗೊಳಿಸಲು ಸರ್ಕಾರವೂ ಕ್ರಮ ಕೈಗೊಳ್ಳುವುದೇ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) ಮುಂಖ ಮಂತ್ರಿಗಳ ಪರವಾಗಿ).—

ಅ) ಸದರಿ ಭೂಮಿಯು ಸರ್ಕಾರದಿಂದ ನಗರ ಭೂ ಪರಿಮಿತಿ ವ್ಯಾಪ್ತಿಯಿಂದ ವಿನಾಯಿತಿ ಪಡೆದಿದೆ. ಭೂ ಮಾಲೀಕರಿಂದ ಗೃಹ ನಿರ್ಮಾಣ ಸಂಸ್ಥೆಗೆ ಮಾರಾಟ ಮಾಡಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿಲ್ಲ.

ಆ) ಈ ಭೂಮಿಯಲ್ಲಿ ಖಾಸಗಿ ಬಡಾವಣೆಗೆ ಒಪ್ಪಿಗೆ ನೀಡಿಲ್ಲ. ಆದರೆ ಈ ಜಮೀನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಡಾವಣೆಯಲ್ಲಿದೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ.—ಮಾನ್ಯ ಉಪಾಧ್ಯಕ್ಷಣಿಯವರೆ, ನನ್ನ ಪ್ರಶ್ನೆಗೆ ಉತ್ತರವಾಗಿ ಮಾನ್ಯ ಮಂತ್ರಿಗಳು ಅರ್ಬನ್ ಸೀಲಿಂಗ್ ಕ್ಲಿಯರೆನ್ಸ್‌ನ್ನು ಕೊಟ್ಟಿದ್ದೇವೆ ಎಂಬುದಾಗಿ ಹೇಳಿದ್ದಾರೇ ನಾನಾದರೂ ಕೇಳುತ್ತೇನೆ. ಕ್ಲಿಯರೆನ್ಸ್ ಕೊಡಬೇಕಾದರೂ ಕೂಡ ಬಿ.ಡಿ.ಎ. ನವರಿಂದ ನೊ, ಆಬ್ಜೆಕ್ಷನ್ ಸರ್ಟಿಫಿಕೇಟನ್ನು ತೆಗೆದುಕೊಂಡ ಮೇಲೆ ಸರ್ಕಾರದವರು ಕೊಡತಕ್ಕದ್ದು. ಬಿ.ಡಿ.ಎ.ನಿಂದ ಎನ್.ಒ.ಸಿ.ಯನ್ನು ತೆಗೆದುಕೊಂಡ ಮೇಲೂ ಕೂಡ ಈ ಲೇಔಟ್‌ನ್ನು ಇದುವರೆಗೂ ಏತಕ್ಕೆ ಅಪ್ರೂವ್ ಮಾಡಿಲ್ಲ?

ಇನ್ನು ನನ್ನ ೨ನೇ ಕ್ಲಾರಿಫಿಕೇಷನ್ ಎಂದರೆ (೩) ಪ್ರಶ್ನೆಗೆ ಉತ್ತರಿಸುತ್ತಾ ಯಾವುದೇ ರೀತಿಯ ಹಾರ್ಡ್‌ಷಿಪ್ ಕೂಡ ಆಗಿಲ್ಲ ಮತ್ತು ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದಾರೆ. ನನಗೆ ಗೊತ್ತಿರುವಂತೆ ಸುಮಾರು ೧೦-೧೨ ಕೇಸುಗಳು ಇಂಜಕ್ಷನ್ ಆಗಿದ್ದರೂ ಕೂಡ, ಕೇಸು ಹೈಕೋರ್ಟಿನಲ್ಲಿ ಇದ್ದರೂ ಕೂಡ ಈ ವಿಚಾರ ನಮಗೆ ಗೊತ್ತಿಲ್ಲ, ಉದ್ಭವಿಸುವುದಿಲ್ಲ ಎಂದು ಹೇಳುತ್ತಿರುವುದು ಸರಿಯಲ್ಲ. ಯಾರದ್ದೋ ಜಮೀನನ್ನು ಸೊಸೈಟಿಯ ಮುಖಾಂತರ ತೆಗೆದುಕೊಂಡು ಇದನ್ನು ನೀವು ಯಾರಿಗೆ ಕೊಟ್ಟಿದ್ದೀರೆಂದರೆ, ಒಂದೇ ಜಾಶಿಗೆ, ಒಂದೇ ಕೊಮಿಗೆ ಅಷ್ಟೇ ಅಲ್ಲ, ಒಂದೇ ಮನೆಗೆ ಸೇರಿದಂಥ ೨೦ ಜನರಿಗೆ ಅಲಾಟ್‌ಮೆಂಟ್‌ನ್ನು ಮಾಡತಕ್ಕ ಪ್ರಯತ್ನ ಮಾಡಿದ್ದಾರೆ. ಇದು ಹಾರ್ಡ್‌ಷಿಪ್ ಅಲ್ಲವೇ? ಎಂಬುದನ್ನು ಹೇಳಬೇಕು. ಈ ಅಲಾಟ್‌ಮೆಂಟ್‌ನ್ನು ನೀವು ಕ್ಯಾನ್ಸಲ್ ಮಾಡುತ್ತೀರಾ?

ಶ್ರೀ ಟಿ.ಎನ್. ನರಸಿಂಹಮೂರ್ತಿ.—ಮಾನ್ಯ ಉಪಾಧ್ಯಕ್ಷಣಿಯವರೇ ಮಾನ್ಯ ಸದಸ್ಯರು ಕೇಳಿರತಕ್ಕಳಿ ಪ್ರಶ್ನೆಗಳಿಗೂ ನೇರವಾಗಿ ಮತ್ತು ಸ್ಪಷ್ಟವಾಗಿ ಉತ್ತರವನ್ನು ಹೇಳಿದ್ದೇವೆ. ಇದಕ್ಕೆ ಹೊರತಾಗಿ ಈಗ ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡುತ್ತಿದ್ದಾರೆ ಅಂದರೆ ಇದನ್ನು ಪ್ರಭಾವಿ ವ್ಯಕ್ತಿಗಳಿಗೆ, ಪಟ್ಟಭದ್ರ ಹಿತಾಸಕ್ತಿಗಳಿಗೆ ಕೊಟ್ಟಿದ್ದಾರೆಂದು ಹೇಳುತ್ತಿರುವುದು ಈಗ ತಾನೇ ನನ್ನ ಗಮನಕ್ಕೆ ಬಂದಿದೆ. ಈ ವಿಚಾರ ಹೈಕೋರ್ಟಿನಲ್ಲಿರುವುದರಿಂದ ಇದರ ಬಗ್ಗೆ ಇಲ್ಲಿ ಹೆಚ್ಚು ದೀರ್ಘವಾಗಿ ಚರ್ಚೆ ಮಾಡತಕ್ಕದ್ದು ಸೂಕ್ತವಲ್ಲ. ನ್ಯಾಯಾಲಯದಲ್ಲಿರತಕ್ಕ ಈ ಕೇಸು ಇತ್ಯರ್ಥವಾದ ಮೇಲೆ ಇದರ ಸತ್ಯಾಸತ್ಯತೆಗಳನ್ನು ಮತ್ತು ಆರ್ಹತೆಯನ್ನು ಪರಿಶೀಲಿಸುವಂತೆ ಬಿ.ಡಿ.ಎ.ನವರಿಗೆ ಆದೇಶವನ್ನು ಕೊಟ್ಟು ಮುಂಕ್ರಾಯಗೊಳಿಸುವಂತೆ ತಿಳಿಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ.—ಹಾಗಾದರೆ ಕೋರ್ಟಿನಲ್ಲಿರತಕ್ಕ ಕೇಸು ಇತ್ಯರ್ಥವಾಗುವವರೆಗೂ ಆಲ್ಲಿ ಯಾರೂ ಕೂಡ ಮನೆಯನ್ನು ಕಟ್ಟುದಂತೆ ಕ್ರಮಕೈಗೊಳ್ಳುತ್ತೀರಾ? ಅಥವಾ ಅಲಾಟ್‌ಮೆಂಟನ್ನು ಕ್ಯಾನ್ಸಲ್ ಮಾಡಿ ಸಸ್ಪೆನ್‌ಷನ್‌ನಲ್ಲಿ ಇಡುತ್ತೀರಾ? ಆ ಜಾಗವನ್ನು ಹಾಗೆಯೇ ಖಿಲ್ಲಾ ಇಡುತ್ತೀರಾ?

ಶ್ರೀ ಟಿ.ಎನ್. ನರಸಿಂಹಮೂರ್ತಿ.—ಅದನ್ನು ಮಾಡಲಿಕ್ಕೆ ಬಹಳ ಕಷ್ಟವಾಗುತ್ತದೆ.

ಶ್ರೀ ಟಿ. ಬಿ. ಜಯಚಂದ್ರ.—ಕಷ್ಟವಾಗುತ್ತದೆಂದರೆ ಹೇಗೆ? ಕೋರ್ಟ್‌ನಲ್ಲಿರತಕ್ಕ ಕೇಸು ಇತ್ಯರ್ಥವಾಗುವವರೆಗೂ ನಾವು ಮಾಡುವುದಿಲ್ಲ ಎಂದು ತಾವು ಹೇಳುತ್ತಿದ್ದೀರಿ ನನ್ನ ಆರೋಪ ಆದರೂ ಇಷ್ಟೇ, ಒಂದೇ ಮನೆಯವರಿಗೆ ೨೦ ಸೈಟುಗಳನ್ನು ಕೊಟ್ಟಿದ್ದಾರೆಯೆಂದು. ಇದರ ಬಗ್ಗೆ ತಾವು ತನಿಖೆ ಮಾಡಿಸುತ್ತೀರಾ? ಕಾನೂನು ಉಲ್ಲಂಘನೆಯಾಗಿದ್ದರೆ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುತ್ತೀರಾ? ನಾನು ಇರತಕ್ಕ ವಿಚಾರವನ್ನು ನೇರವಾಗಿ ಹೇಳುತ್ತಿದ್ದರೂ ಕೂಡ ಇದನ್ನು ಸಸ್ಪೆನ್‌ಷನ್‌ನಲ್ಲಿ ಇಡುವುದಕ್ಕೆ ಸಾಧ್ಯವಿಲ್ಲ ಎಂದರೆ ಏನು ಅರ್ಥ? ತಾವು ದಯವಿಟ್ಟು ಇದನ್ನು

ಸಸ್ಪೆನ್‌ಷನ್‌ನಲ್ಲಿ ಇಡಬೇಕು. ಕೋರ್ಟ್‌ನಲ್ಲಿರತಕ್ಕ ಕೇಸು ಇತ್ಯರ್ಥವಾದಮೇಲೆ ತಾವು ಕ್ರಮ ತೆಗೆದುಕೊಳ್ಳಿ.

ಶ್ರೀ ಟಿ.ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಈ ವಿಚಾರದ ಬಗ್ಗೆ ಪ್ರತ್ಯೇಕವಾಗಿ ಚರ್ಚೆ ಮಾಡಲಿ. ಅವರಲ್ಲಿ ಇರತಕ್ಕಂಥ ಡಾಕ್ಯುಮೆಂಟ್ಸ್ ಏನೇ ಇರಲಿ, ಅದನ್ನು ಒದಗಿಸಲಿ. ಆದರ ಬಗ್ಗೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆಂದು ಹೇಳಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ.—ಮಾನ್ಯ ಅಧ್ಯಕ್ಷರೇ, ಮೂರು ದಿವಸಗಳ ಹಿಂದೆಯೇ ಎಲ್ಲಾ ಡಾಕ್ಯುಮೆಂಟ್ಸ್‌ನ್ನು ಒದಗಿಸಿದ್ದೇನೆ. ತಾವು ಈಗ ನನ್ನನ್ನು ಕರೆದಿದ್ದೀರಿ, ನಾನು ತಮಗೆ ಎಲ್ಲಾ ಡಾಕ್ಯುಮೆಂಟ್ಸ್‌ನ್ನು ತಂದುಕೊಡುತ್ತೇನೆ.

ಶ್ರೀ ಟಿ.ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಉತ್ತರವನ್ನು ಕೊಟ್ಟಿರುತ್ತಾರೆ, ವಿಷಯವನ್ನು ಸ್ಪಷ್ಟಪಡಿಸಿದ್ದರೆ ತಾವು ಏನು ಹೊಸ ವಿಚಾರ ಗಳನ್ನು ಹೇಳುತ್ತಿದ್ದೀರಿ, ಆದರ ಬಗ್ಗೆ ದಾಖಲೆಗಳನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟರೆ ಅದನ್ನು ಪ್ರಾಧಿಕಾರಕ್ಕೆ ಕಳುಹಿಸಿಕೊಟ್ಟು, ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್. ಮಾನ್ಯ ಅಧ್ಯಕ್ಷರೇ ಕನ್ನಡವನ್ನು ಆಡಳಿತ ಭಾಷೆಯಾಗಿ ಸರ್ಕಾರ ದಲ್ಲಿ ಜಾರಿಗೆ ತರಬೇಕೆಂದು ಸರ್ಕಾರ ನೀತಿನಿಯಮಗಳನ್ನು ಹಾಕಿಕೊಂಡಿರುತ್ತದೆ. ಈ ರೀತಿ ಸರ್ಕಾರದ ನಿಯಮವಿದ್ದರೂ ಸಹ ಕನ್ನಡ ಬೆರಳಚ್ಚುಗಾರರನ್ನು ಇಲ್ಲಿಯವರೆಗೆ ನೇಮಕ ಮಾಡದಿರತಕ್ಕಂಥದ್ದಕ್ಕೆ ಕಾರಣವೇನು? ೧೯೯೦ ಏಪ್ರಿಲ್‌ನಲ್ಲಿ ಆಯ್ಕೆಯಾಗಿರುವ ಬೆರಳಚ್ಚುಗಾರರನ್ನು ಇಲ್ಲಿಯವರೆಗೆ ನೇಮಕ ಮಾಡದಿರುವುದಕ್ಕೆ ಸರ್ಕಾರದ ಉದ್ದೇಶವೇನು? ೬೫ ಸಾವಿರ ಬೆರಳಚ್ಚು ಯಂತ್ರಗಳು ಸರ್ಕಾರ ದಲ್ಲಿರುವಾಗ ಒಂದು ಕಡೆ ಸರ್ಕಾರದಲ್ಲಿ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುತ್ತೇವೆಂದು ಹೇಳುವಾಗ ಕನ್ನಡ ಬೆರಳಚ್ಚುಗಾರರ ನೇಮಕಾತಿಯನ್ನು ತಡೆಹಿಡಿದಿರುವುದು ಸರ್ಕಾರದ ಯಾವ ನೀತಿ? ಕನ್ನಡ ಬೆರಳಚ್ಚುಗಾರರನ್ನು ಯಾವಾಗ ನೇಮಕ ಮಾಡುತ್ತೀರಿ ದಯವಿಟ್ಟು ತಿಳಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಕನ್ನಡ ರಾಜ್ಯ ಭಾಷೆಯಾಗಿ ಅದನ್ನು ಅನುಷ್ಠಾನಕ್ಕೆ ತರಲಿಕ್ಕೆ ಕನ್ನಡ ಬೆರಳಚ್ಚುಗಾರರ ಹುದ್ದೆಗಳ ವಿಚಾರ ಒಂದೇ ಸೀಮಿತವಾದ ವಿಚಾರವಲ್ಲ. ಖಾಲಿ ಇರುವ ಹುದ್ದೆಗಳನ್ನು, ಅದರಲ್ಲೂ ಪ್ರಮುಖವಾಗಿ ಸೆಕ್ರೆಟರಿಯೇಟ್‌ನಲ್ಲಿ ತುಂಬಬಾರದೆಂದು ಹೇಳಿ ಒಂದು ತಡೆ ಆ ತಡೆ ಆದೇಶದ ಪ್ರಕಾರ ಇದಕ್ಕೂ ಅನ್ವಯವಾಗುತ್ತದೆ. ಆದರೆ ಇದರ ಬಗ್ಗೆ ಒಂದು ಹೊಸ ನೀತಿ ನಿರೂಪಣೆಯನ್ನು ನೇರ ನೇಮಕಾತಿಯ ಬಗ್ಗೆ ನಾವು ರೂಪಿಸತಕ್ಕಂಥ ಹಂತದಲ್ಲಿ ಸರ್ಕಾರ ಇದೆ. ಆದರ ಜೊತೆಯಲ್ಲಿ ಮಾನ್ಯ ಹಣ ಕಾಸಿನ ಸಚಿವರು ಕೂಡ ಯಾವುದೇ ಹುದ್ದೆಗಳನ್ನು ತುಂಬಬಾರದು ಎನ್ನುವ ಉದ್ದೇಶ ಇರುವುದರಿಂದ ಈ ಎರಡು ಕಾರಣಗಳಿಂದ ಕನ್ನಡ ಬೆರಳಚ್ಚುಗಾರರನ್ನು ತುಂಬಿಲ್ಲ ಕನ್ನಡ ಬೆರಳಚ್ಚುಗಾರರ ವಿಚಾರವು ಇದಕ್ಕೆ ಅನುಗುಣವಾಗಿಬಿಟ್ಟಿದೆ. ಆದರೆ ಅವಶ್ಯಕತೆಗೆ ಅನುಗುಣ ವಾಗಿ ಖಾಲಿ ಇರುವ ಹುದ್ದೆಗಳನ್ನು ತುಂಬತಕ್ಕಂಥ ನೀತಿಯನ್ನು ಪುನರಾವಲೋಕನ ಮಾಡಿದಾಗ ಇದರ ಬಗ್ಗೆ ನಿರ್ಣಯವನ್ನು ತೆಗೆದು ಕೊಳ್ಳಲು ಸಾಧ್ಯವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಸುತ್ತಿಬಳಸಿಕೊಂಡು ಹೋಗುತ್ತಿದ್ದಾರೆ. ಒಂದು ನಿಖರವಾದ ಅಭಿಪ್ರಾಯವನ್ನು ಹೇಳುತ್ತಿಲ್ಲ, ರಾಜ್ಯದ ಆಡಳಿತ ಭಾಷೆ ಕನ್ನಡ ಇಲ್ಲ ಎಂದು ಹೇಳಿ ಅಥವಾ ಉಂಟು ಎಂದು ಹೇಳಿ, ಕನ್ನಡದಲ್ಲಿಯೇ ಆಡಳಿತವನ್ನು ನಡೆಸಬೇಕೆಂದು ತೀರ್ಮಾನ ಸರ್ಕಾರದವರು ತೆಗೆದುಕೊಂಡಮೇಲೆ ಯಾವ ರೀತಿಯಾದ ಕಟ್ಟುಕಟ್ಟಲೆಗಳು ಇದ್ದರೂ ಅದನ್ನು ಬದಿಗೊತ್ತಿ ಕಸದಬುಟ್ಟಿಗೆ ಹಾಕಿ, ನೀವು ನೇರವಾಗಿ ಕನ್ನಡ ಬೆರಳಚ್ಚುಗಾರರನ್ನು ನೇಮಕ ಮಾಡುತ್ತೀರಾ? ಹಣಕಾಸಿನ ವ್ಯವಸ್ಥೆ ಇದೆಲ್ಲವನ್ನು ಬಿಟ್ಟು ಸ್ಪಷ್ಟವಾಗಿ ಈ ವಿಚಾರದಲ್ಲಿ ಮಾನ್ಯ ಸಚಿವರು ಹೇಳಬೇಕೆಂದು ಕೇಳುತ್ತೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ.—ಎಕಾನಮಿ ಆರ್ಡರ್ ಎಲ್ಲಿಯವರೆಗೆ ಇರುತ್ತದೆ, ಅಲ್ಲಿಯ ವರೆಗೆ ಅಪಾಯಿಂಟ್‌ಮೆಂಟ್ ಮಾಡುವುದಿಲ್ಲ,

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅರ್ಥ ಸಚಿವರಿಂದ ಈ ಉತ್ತರ ಬಂದದ್ದು ಶೋಚನೀಯ ಮುಖ್ಯ ಮಂತ್ರಿಗಳ ಹೆಸರಿನಲ್ಲಿ ಉತ್ತರಕೊಟ್ಟವರು ಸಂಸದೀಯ ಸಚಿವರು. ಸಮರ್ಥನೆ ಮಾಡು

ವವರು ಅರ್ಥ ಸಚಿವರು. ಇದು ಬೇಜವಾಬ್ದಾರಿ ಸರ್ಕಾರ, ಕನ್ನಡದ ಬಗ್ಗೆ ಒಳ್ಳೆಯ ಅಭಿಪ್ರಾಯ ಇಲ್ಲ. ನಿಮ್ಮ ಹೃದಯ ಬಿಚ್ಚಿ ಹೇಳಿ, ಏನು ಹೆಣಕಾಸಿನ ತೊಂದರೆ ಇದೆ ?

ಉಪಾಧ್ಯಕ್ಷಿಣಿಯವರು.- ನೀವು ಪ್ರಶ್ನೆ ಹಾಕಿ ಉತ್ತರ ತಗೆದುಕೊಳ್ಳಬೇಕು. ಅದು ಬಿಟ್ಟು...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಇದು ಸರಿಯಲ್ಲ ಕನ್ನಡದ ಬಗ್ಗೆ ಹೇಳಬೇಕು. ಇಲ್ಲದಿದ್ದರೆ ಇದನ್ನು ನೀತಿಗೆಟ್ಟ ಸರ್ಕಾರ, ಹೊಣೆಗೆ ಡಿ ಸರ್ಕಾರ ಎಂದು ಹೇಳುತ್ತೇನೆ. ಈ ನೀತಿ ಸರಿಯಲ್ಲ. ಕನ್ನಡ ಪ್ರಶ್ನೆ ಬಗ್ಗೆ ನಿಮ್ಮ ನೀತಿ ಸರಿಯಲ್ಲ. (ಮಾನ್ಯ ಸದಸ್ಯರು ಪ್ರಶ್ನೆಯ ಪಟ್ಟಿಯನ್ನು ಹರಿದು ಹಾಕಿದರು)

(ಗೊಂದಲ)

ಉಪಾಧ್ಯಕ್ಷಿಣಿಯವರು.—ನಾನು ನಿಂತಿದ್ದೇನೆ. ದಯವಿಟ್ಟು ನೀವು ಕುಳಿತುಕೊಳ್ಳಿ. ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ಕೇಳೋಣ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ನಮಗೂ ಜವಾಬ್ದಾರಿಇದೆ. ಜವಾಬ್ದಾರಿಯಿಂದ ನಾನು ಮಾತನಾಡುತ್ತಿದ್ದೇನೆ.

ಶ್ರೀ ಟಿ. ಎಂ. ಮಂಜುನಾಥ್.—ನಾನು ಕ್ರಿಯಾಲೋಪ ಎತ್ತುತ್ತೇನೆ.

ಉಪಾಧ್ಯಕ್ಷಿಣಿಯವರು —ಪ್ರಶ್ನೋತ್ತರ ವೇಳೆಯಲ್ಲಿ ಕ್ರಿಯಾಲೋಪಕ್ಕೆ ಅವಕಾಶ ಇಲ್ಲ, ಕುಳಿತುಕೊಳ್ಳಿ. ಪ್ರಶ್ನೋತ್ತರ ಸಮಯದಲ್ಲಿ ಬೇರೆಯವರು ಮಾತನಾಡುವುದಕ್ಕೆ ಅವಕಾಶ ಇಲ್ಲ ದಯವಿಟ್ಟು ಕುಳಿತುಕೊಳ್ಳಿ. ಮಂತ್ರಿಗಳು ಉತ್ತರ ಹೇಳುತ್ತಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಕಳೆದ ೫–೬ ವರ್ಷಗಳಿಂದ ಖಾಲಿ ಇರತಕ್ಕ ೮೫ ಸಾವಿರ ಹುದ್ದೆಗಳನ್ನು ಕೇವಲ ೬ ತಿಂಗಳಲ್ಲಿ ತುಂಬಲಿಕ್ಕೆ ಆಗುವುದಿಲ್ಲ. ಮಾನ್ಯ ಸದಸ್ಯರು ಏಕೋ ಭಾವೋದ್ರೇಕದಿಂದ ಮಾತನಾಡುತ್ತಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಭಾವೋದ್ರೇಕ ಅಲ್ಲ. ಕನ್ನಡದ ಬಗ್ಗೆ ನನ್ನ ನೋವನ್ನು ಹೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ೬–೭ ವರ್ಷಗಳಿಂದ ಖಾಲಿ ಇದ್ದಂತಹ ಎಲ್ಲಾ ಹುದ್ದೆಗಳನ್ನು ತುಂಬತಕ್ಕದ್ದು, ಹಳಿ ತಪ್ಪಿದ ಸರ್ಕಾರದ ಕಾರ್ಯಕ್ರಮಗಳನ್ನು ಹಳಿಗೆ ತರತಕ್ಕದ್ದು...

ಶ್ರೀ ಪಿ.ಜಿ.ಆರ್. ಸಿಂಧ್ಯ.— ಎಲ್ಲಿ ಹಳಿ ತಪ್ಪಿದೆ ?

(ಗೊಂದಲ)

ಶ್ರೀ ಪಿ.ಜಿ ಆರ್. ಸಿಂಧ್ಯ.—ಪ್ರಶ್ನೆಗೆ ಉತ್ತರ ಕೊಡುವುದು ಬಿಟ್ಟು ಏಕೆ ಏನೇನೋ ಮಾತನಾಡುತ್ತಿದ್ದೀರಿ ?

(ಗೊಂದಲ)

ಉಪಾಧ್ಯಕ್ಷಿಣಿಯವರು.—ಇಷ್ಟೊಂದು ಜನ ಒಟ್ಟಿಗೆ ನಿಂತು ಮಾತನಾಡಿದರೆ ನೀವು ಮಾತನಾಡುವುದು ಯಾವುದೂ ರೆಕಾರ್ಡಿಗೆ ಹೋಗುವುದಿಲ್ಲ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್,—ಮಾನ್ಯ ಸಚಿವರಾದ ಮೊಯಿಲಿಯವರಿಂದ ನಾನು ಈ ಉತ್ತರ ನಿರೀಕ್ಷೆ ಮಾಡಿರಲಿಲ್ಲ ತಾವು ಕನ್ನಡದ ಬಗ್ಗೆ ಅಭಿಮಾನ ಇರತಕ್ಕವರು. ನಿಮ್ಮಿಂದ ಈ ಉತ್ತರ ನಿರೀಕ್ಷಣೆ ಮಾಡಿರಲಿಲ್ಲ. ಇದು ಸರಿಯಲ್ಲ ಎಂದು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ಇದು ಪ್ರಶ್ನೋತ್ತರಕಾಲ. ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಪರಿಸ್ಥಿತಿಯನ್ನು ಒಮ್ಮೆಲೇ ರಾತ್ರಿ ಬೆಳಗಾಗುವುದರೊಳಗೆ ಸುಧಾರಿಸಿ ಕೊಂಡು ಆಡಳಿತವನ್ನು ಸರಿಯಾಗಿ ನಡೆಸುವುದಕ್ಕಾಗುವುದಿಲ್ಲ. ಸನ್ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ಅವರು ಕನ್ನಡದ ಬಗ್ಗೆ ಪ್ರಶ್ನೆ ಬಂದಾಗ ಭಾವೋದ್ರೇಕಗೊಳ್ಳುತ್ತಾರೆ. ಅದು ತಪ್ಪಲ್ಲ. ಅಭಿಮಾನ ಜಾಸ್ತಿಯಾದಾಗ ಒಮ್ಮೆಲೇ ಭಾವೊ ದ್ರೇಕ ಬಂದರೆ ಅದರಲ್ಲಿ ಏನು ತಪ್ಪಿದೆ ?

ಶ್ರೀ ವಾಟಾಳ್ ನಾಗರಾಜ್.—ಭಾವೋದ್ರೇಕ ಅಲ್ಲ ಅಧ್ಯಕ್ಷರೆ, ದೇವರು ಒರುತ್ತದೆಯೇ ಸ್ವಾಮಿ ನಮಗೆ ? ಎಲ್ಲಿ ಭಾವೋದ್ರೇಕ ? ಸರ್ಕಾರದ ನೀತಿಗಾಗಿ, ಸರ್ಕಾರದ ಹೊಣೆಗೇಡಿತನಕ್ಕಾಗಿ ಕನ್ನಡದ ವಿರೋಧಿ ನೀತಿಗಾಗಿ ಹೇಳುತ್ತಿದ್ದೇನೆ. ಒಂದು ಕಡೆ ಕನ್ನಡ ಆಡಳಿತಭಾಷೆ ಮತ್ತೊಂದು ಕಡೆ ಬೇಜವಾಬ್ದಾರಿ ಮಾತು.

ಉಪಾಧ್ಯಕ್ಷರಿಯವರು.—ಮಾನ್ಯ ನಾಗರಾಜ್‌ರವರೆ, ನಿಮಗೆ ಉತ್ತರ ಬೇಡ ಎಂದರೆ ಮುಂದೆ ಹೋಗುತ್ತೇನೆ. ಮಾನ್ಯ ಮಂತ್ರಿಗಳು ಮಾತನಾಡುತ್ತಿದ್ದಾರೆ. ಏನು ಹೇಳುತ್ತಾರೆ ಕೇಳಿ. ನಂತರ ಮಾತನಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ಉತ್ತರ ಕೊಡುವುದಕ್ಕೆ ಎದ್ದುನಿಂತಿದ್ದೇನೆ. ಈ ಸದನಕ್ಕೆ ಭಮಾಧಾನವಾಗುವ ಹಾಗೆ ನಾನು ಉತ್ತರ ಕೊಡುತ್ತೇನೆ. ತಕ್ಷಣ ಎದ್ದುನಿಂತರೆ ಹೇಗೆ ? ಬೆವೋದ್ರೇಕ ಎಂಬ ಪದ ಬಿಡೋಣ. ಹಾಗಾದರೆ ಉದ್ರೇಕದಿಂದ ಮಾತನಾಡುತ್ತೀರಿ ಎಂದು ಹೇಳ ತೇಕೋ ಏನು ಹೇಳಬೆಕು ? ಯಾವುದಾದರೂ ಶಬ್ದ ಉಪಯೋಗಿಸಬೇಕಲ್ಲ.

ಶ್ರೀ ವಾಟಾಳ್ ನಾಗರಾಜ್.—ನಮಗೆ ರಕ್ತ ಕುದಿಯುವ ರೀತಿಯಲ್ಲಿ ಮಾತನಾಡುತ್ತೀರಿ. ಈ ಸರಹ ಮಾತು ಬರುವುದಕ್ಕೆ ನೀವೇಕಾರಣ.

ಶ್ರೀ ಎಂ. ವೀರಪ್ಪ ಮೊಯಿಲ್ಲಿ.—ಈ ನೇಪಾತಿಗೆ ಹುದ್ದೆಗಳು ಖಾಲಿ ಇವೆ ಎಂದು ಏನು ಹೇಳುತ್ತಿದ್ದಾರೆ ಇದು ನಮ್ಮ ಸರ್ಕಾರ ಬಂದಮೇಲೆ ಖಾಲಿಯಾದವುಗಳಲ್ಲ. ಅನೇಕ ವರ್ಷಗಳಿಂದ ಖಾಲಿ ಇದ್ದಂಥ ಹುದ್ದೆಗಳು ಇವು. ನಮ್ಮ ಸರ್ಕಾರ ಬಂದಮೇಲೆ ಖಾಲಿ ಇದ್ದರೆ, ನಾವು ತುಂಬಿಸದೇ ಇದ್ದರೆ ನೇರವಾಗಿ ನಮ್ಮ ಮೇಲೆ ಆಪಾದನೆ ಮಾಡಿದರೆ ಅರ್ಥವಿದೆ. ನೀತಿಗೆಟ್ಟ ಸರ್ಕಾರ. ಅಪಾಯಿಂಟ್‌ಮೆಂಟ್ ಮಾಡುವುದಿಲ್ಲ ಎಂದು ಹೇಳಿದರು. ಯಾರ ಕಡೆ ಬೆಟ್ಟು ಮಾಡಿ ತೋರಿಸಬೇಕೋ ಆ ಕಡೆ ತೋರಿಸಬೇಕು. ಆ ಕಡೆ ಬೆಟ್ಟು ತೋರಿಸಿದರೆ ಸಿಂಧ್ಯಾ ಅವರು ಎದ್ದುನಿಲ್ಲುತ್ತಾರೆ. ಈ ಇಬ್ಬರ ಭಾವೋದ್ರೇಕದಿಂದ ತೊಂದರೆಯಾಗುತ್ತಿದೆ. ಬಾಣ ಯಾವ ಕಡೆ ಪ್ರಯೋಗ ಮಾಡಬೇಕೋ ಆ ಕಡೆ ಮಾಡಬೇಕು. ಎಲ್ಲೆಲ್ಲೋ ಮಾಡಿದರೆ ಏನು ಪ್ರಯೋಜನ ? ಬಾಣ ಎಲ್ಲಿಗೆ ಪ್ರಯೋಗ ಮಾಡಬೇಕೋ ಅಲ್ಲಿಗೆ ಮಾಡಿ. ಆದರೆ ಇದಕ್ಕೆ ನಾವು ಜವಾಬ್ದಾರರಲ್ಲ,

ಶ್ರೀ ವಾಟಾಳ್ ನಾಗರಾಜ್.—ಇದು ಸತ್ತ ಕುದುರೆ. ಕುಂಟ ಕುದುರೆ. ಕುಂಟು ಕುದುರೆ ಹಿಡಿದುಕೊಂಡು ನಾವೇನುಮಾಡೋಣ? ಇವರನ್ನು ಹಿಡಿಯೋಣವೇ? ಇವರ ಕತ್ತು ಹಿಸುಕೋಣವೇ? (ಜನತಾ ದಳದವರನ್ನು ಕುರಿತು). ಆಡಳಿತ ಮಾಡುತ್ತಿರುವವರು ನೀವು. ನೀವು ಕುದುರೆ ಸವಾರಿ ಮಾಡುತ್ತಿರುವವರು.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್.—ಮಾಡುವುದಕ್ಕಾಗುತ್ತದೋ ಇಲ್ಲವೋ ನಿರ್ದಿಷ್ಟವಾಗಿ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅವಸರ ಮಾಡಬೇಡಿ. ಕುಂಟು ಕುದುರೆ ಮೇಲೆ ಸವಾರಿ ಮಾಡುತ್ತಿದ್ದಾರೋ, ಸತ್ತ ಕುದುರೆ ಮೇಲೆ ಸವಾರಿ ಮಾಡುತ್ತಿದಾರೋ ಅಥವಾ ಸತ್ತ ಕತ್ತೆ ಮೇಲೆ ಸವಾರಿ ಮಾಡುತ್ತಿದ್ದಾರೋ ನೋಡಬೇಕು. ಫೈನಾನ್ಸ್ ಮಿನಿಸ್ಟರ್ ಅವರು ಆಲೋಚನೆ ಮಾಡುತ್ತಿದ್ದೇನೆ ಎಂದು ಹೇಳಿದ್ದಾರೆ. ಆಲೋಚನೆ ಮಾಡುವುದಕ್ಕೆ ಅವಕಾಶ ಬೇಕಲ್ಲ. ಯಾವ ಕುದುರೆ ಎಂಬುದನ್ನು ನೋಡೋಣ. ಸತ್ತ ಕುದುರೆ ಆದರೆ ಸಮಾಧಿ ಮಾಡಬೇಕಾಗುತ್ತದೆ. ಕುಂಟು ಕುದುರೆ ಆದರೆ ಸರಿ ಮಾಡಬೇಕಾಗುತ್ತದೆ. ವಿಕಾನಮಿ ಬ್ಯಾನನ್ನು ಎಲ್ಲಾ ಹುದ್ದೆಗಳಿಗೂ ಅನ್ವಯ ಮಾಡಿದ್ದೇವೆ. ಆದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಆರ್ಥಿಕ ತಡೆಯನ್ನು ತೆಗೆದುಹಾಕಿದೆ ಅದೇರೀತಿ ಯಲ್ಲಿ ಬೆರಳಚ್ಚುಗಾರರ ವಿಚಾರ ಕೂಡ ಡಿ.ಪಿ.ಎ.ಆರ್. ಸಚಿವರು ಆರ್ಥಿಕ ಇಲಾಖೆಗೆ ಬರೆದಿದೆ, ಸೆಲೆಕ್ಷನ್ ಪ್ರೊಸಸ್ ಮುಗಿದಿದೆ. ಪಬ್ಲಿಷ್ ಕೂಡ ಆಗಿದೆ. ಈ ಬಗ್ಗೆ ಒಂದು ವಿಚಾರ ಸೃಷ್ಟೀಕರಿಸುತ್ತೇನೆ.

ರಾಜ್ಯಭಾಷೆಯಾಗಿ ಕನ್ನಡ ಅನುಷ್ಠಾನ ಮಾಡುವ ದೃಷ್ಟಿಯಿಂದ ಈ ಹುದ್ದೆಗಳನ್ನು ತುಂಬಲೇಬೇಕು, ಅದನ್ನು ತುಂಬದಿರುವುದರಿಂದ ಆಡಳಿತ ಭಾಷೆಯೊಗಲು ಅಡ್ಡಿಯಾಗಿದೆ ಎಂಬುವನ್ನು ನಾನು ಒಪ್ಪುವುದಿಲ್ಲ. ಸ್ವಲ್ಪ ತಾಳ್ಮೆಯಿಂದ ಕೇಳಿ. ಇಲ್ಲದಿದ್ದರೆ ಹಳಿ ತಪ್ಪಿಹೋಗುತ್ತದೆ. ನಾನು ಕೊನೇ ಹಂತಕ್ಕೆ ಬರುತ್ತಿದ್ದೇನೆ. ನೇರವಾದ ಉತ್ತರ ಅಂದರೆ ಈ ಬಗ್ಗೆ ಸರ್ಕಾರ ಬಹಳ ಗಂಭೀರವಾಗಿ ಆಲೋಚನೆ ಮಾಡುತ್ತಿದೆ. ಏಕೆಂದರೆ ಕನ್ನಡ ಬೆರಳಚ್ಚುಗಾರರ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಈಗಾಗಲೇ

೧೦–೦೦ ಎ.ಎಂ.

ಡಿ.ಪಿ.ಎ.ಆರ್ ನವರು ಕ್ರಮತೆಗೆದುಕೊಂಡು ಅರ್ಥ ಇಲಾಖೆಗೆ ಕಳುಹಿಸಿದ್ದಾರೆ. ಆದರೆ ಕೆಲವು ಸಾರಿ ಟೋಟಲ್ ಬ್ಯಾನ್ ಇದ್ದರೂ ಕೂಡ ಅವಶ್ಯಕತೆಗೆ ಹೊಂದಿಕೊಂಡಂತೆ, ಕೆಲವು ಸಾರಿ ಇರತಕ್ಕ ಬ್ಯಾನನ್ನು ವಿಶಿಷ್ಟವಾದ ಸಂದರ್ಭದಲ್ಲಿ ತೆಗೆದುಹಾಕಬೇಕಾಗುತ್ತದೆ. ನಮಗೆ ಗೊತ್ತಿದೆ. ಕನ್ನಡವನ್ನು ಅನುಷ್ಠಾನ ಮಾಡುವ ಬಗ್ಗೆ ಇಂತಹ ಬೆರಳಚ್ಚುಗಾರರ ಆವಶ್ಯಕತೆ ಬಹಳವಾಗಿ ಇದೆ, ಇದರ ಬಗ್ಗೆ ವಿಶೇಷವಾಗಿ ಪುನಃ ಆರ್ಥಿಕ ಮಂತ್ರಿಗಳಿಗೆ ಹಾಗೂ ಅರ್ಥ ಇಲಾಖೆಗೆ ಒತ್ತಾಯ ಮಾಡಿ ಆದಷ್ಟು ಜಾಗ್ರತೆ ಈ ಹುದ್ದೆಗಳನ್ನು ಭರ್ತಿ ಮಾಡುವುದರಲ್ಲಿ ಇರತಕ್ಕ ತಡೆಯಾಜ್ಞೆಯನ್ನು ತೆರವು ಮಾಡುವುದಕ್ಕೆ ಪುನಃ ಈ ಸರ್ಕಾರ ಬಹಳ ಗಂಭೀರವಾಗಿ ಆಲೋಚನೆ ಮಾಡಿ ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತದೆ.

ಬಸವಕಲ್ಯಾಣ ಪಟ್ಟಣಕ್ಕೆ ಭೂ ಮಾಪನ ಕಛೇರಿಯನ್ನು ಮಂಜೂರು ಮಾಡುವುದು

೫೦೮ (೧೩೬೯) ಶ್ರೀ ಬಸವರಾಜಪಾಟೀಲ ಅಟ್ಟೂರ್ (ಬಸವಕಲ್ಯಾಣ).—ಮಾನ್ಯ ಕಂದಾಯ ಮತ್ತು ಕಾರ್ಮಿಕ ಸಚಿವರು ಕೆಳಕಂಡ ಪಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಬೀದರ್ ಜಿಲ್ಲೆಯಲ್ಲಿ ಎಷ್ಟು ಭೂ ಮಾಪನ ವಿಭಾಗಗಳಿವೆಯೇ ?

ಆ) ಬಸವ ಕಲ್ಯಾಣ ಪಟ್ಟಣಕ್ಕೆ ಭೂ ಮಾಪನ ಇಲಾಖೆಯನ್ನು ಸರ್ಕಾರ ಯಾವಾಗ ಮಂಜೂರಾತಿ ಮಾಡುವುದು?

ಇ) ಸದರಿ ಇಲಾಖೆಯಿಂದ ಭೂ ಮಾಪನ ಉಪವಿಭಾಗ ಮಂಜೂರು ಮಾಡುವ ಪ್ರಸ್ತಾಪ ವೇನಾದರೂ ಸರ್ಕಾರಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು? (ವಿವರಗಳನ್ನು ಒದಗಿಸುವುದು).

ಶ್ರೀ ಕೆ.ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು).—

ಅ) ಇಲ್ಲ.

ಆ) ಸರ್ಕಾರ ತೀರ್ಮಾನಿಸಿಲ್ಲ.

ಇ) ಹೌದು. ಚಾಲ್ತಿಯಲ್ಲಿರುವ ನಿಯಮಗಳನ್ವಯ ಪರಿಶೀಲಿಸಲಾಗುತ್ತಿದೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್.—ಮಾನ್ಯ ಕಂದಾಯ ಮಂತ್ರಿಗಳು ಕೊಟ್ಟಂತಹ ಉತ್ತರದಿಂದ ಸರ್ಮಪಕವಾದ ಉತ್ತರ ಸಿಕ್ಕಲಿಲ್ಲ. ನಾನು ಕೇಳಿದ ಪ್ರಶ್ನೆ ಬೀದರ್ ಜಿಲ್ಲೆಯಲ್ಲಿ ಎಷ್ಟು ಭೂ–ಮಾಪನಾ ವಿಭಾಗ ಇದೆ ಎಂದು ಆಂತ ಕೇಳಿದ್ದಕ್ಕೆ ಇಲ್ಲ ಎಂದು ಹೇಳಿದ್ದಾರೆ. ಬೀದರ್‌ನಲ್ಲಿ ಭೂ–ಮಾಪನಾ ವಿಭಾಗದ ಕೇಂದ್ರವೊಂದು ಇದ್ದು, ಸಾಧಾರಣ ೫ ತಾಲ್ಲೂಕು ಕೇಂದ್ರಗಳನ್ನು ಒಳಗೊಂಡ ಜಿಲ್ಲೆ ಬೀದರ್. ಅಲ್ಲಿ ಸಾಕಷ್ಟು ರೈತರಿಗೆ ಸರ್ವೆ ಕೆಲಸ ಮಾಡಿಸಿ ಕೊಳ್ಳುವುದಕ್ಕೆ ಬಹಳಷ್ಟು ತೊಂದರೆಯಾಗುತ್ತಿದೆ. ಆದರಲ್ಲೂ ವಿಶೇಷವಾಗಿ ನನ್ನ ಮತ ಕ್ಷೇತ್ರವಾದ ಬಸವಕಲ್ಯಾಣ ತಾಲ್ಲೂಕು ಕೇಂದ್ರ ಬೀದರ್ ಜಿಲ್ಲಾ ಕೇಂದ್ರಕ್ಕೆ ಬಹಳ ದೂರವಲ್ಲಿರತಕ್ಕ ತಾಲ್ಲೂಕು ಕೇಂದ್ರವಾಗಿದೆ. ಸಾಧಾರಣ ೯೦–೯೫ ಕಿಲೋಮೀಟರ್ ದೂರ ಹೋಗಬೇಕು. ಬೀದರ್‌ನಲ್ಲಿ ಇರತಕ್ಕ ಭೂಮಾಪನ ವಿಭಾಗದಲ್ಲಿ ಪೆಂಡಿಂಗ್ ಬಹಳ ಇದೆ. ಅದಕ್ಕಾಗಿ ಈಗಾಗಲೇ ಜಿಲ್ಲಾಧಿಕಾರಿಗಳು ಹಾಗೂ ವಿಭಾಗಾಧಿಕಾರಿಗಳು ಕಂದಾಯ ಆಯುಕ್ತರಿಗೆ ತಿಳುಹಿಸಿ ಬಸವಕಲ್ಯಾಣದಲ್ಲಿ ಭೂ–ಮಾಪನ ಉಪ ವಿಭಾಗವನ್ನು ಮಾಡುವುದಕ್ಕಾಗಿ ಪ್ರಪೋಸಲ್ ತಿಳುಹಿಸಿದ್ದಾರೆ ಅದರ ಬಗ್ಗೆ ಸರ್ಕಾರದ ನಿರ್ಧಿಷ್ಟ ನಿಲುವು ಏನು ಎಂಬುದನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳುವುದಕ್ಕೆ ಬಯಸುತ್ತೇನೆ.